ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಗುಣವಾಗಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ಶಿಕ್ಷಕರ ಕೊರತೆ ಇದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಈ ಕೊರತೆಯನ್ನು ಯಾವಾಗ ತುಂಬಲಾಗುವುದು? ಪಂತ್ರೆ ನನಗೆ ತಿಳಿದ ಪ್ರಕಾರ ಮಂಜೂರಾದ ಶಾಲೆಗಳಿಗೆ ಹುದ್ದೆಗಳನ್ನು ಮಂಜೂರು ಮಾಡಿದರೆ ಅನುಕೂಲವಾಗುತ್ತವೆ ಮತ್ತು ಎಷ್ಟು ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಗುಣವಾಗಿ ಉಪಾಧ್ಯಾಯರ ಕೊರತೆ ಇದೆ. ಇದನ್ನು ಯಾವಾಗ ಸರಿ ಮಾಡುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ ಇರುವ ಖಾಲಿ ಉಪಾಧ್ಯಾಯರ ಸಂಖ್ಯೆ ಮತ್ತು ಮಂಜೂರು ಮಾಡಿದ ಸಂಖ್ಯೆ ಲೆಕ್ಕಕ್ಕೆ ತೆಗೆದುಕೊಂಡರೆ ನಮಗೆ ಳಿವಿ ಹುದ್ದೆಗಳನ್ನು ತುಂಬ ಬೇಕಾಗುತ್ತದೆ. ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆ ಕೇಳಿದ್ದರೆ ಅದೇನೆಂದರೆ ೫೦ ಜನ ಹುಡುಗರಿಗೆ ಒಬ್ಬ ಉಪಾಧ್ಯಾಯರಂತೆ ಎಷ್ಟು ಹುದ್ದೆಗಳು ಬೇಕಾಗುತ್ತದೆ ಎಂದು ಕೇಳಿದ್ದಾರೆ. ಆದಕ್ಕೆ ಒಟ್ಟು ಳಿವಿ ಹುದ್ದೆಗಳು ಎಂದು ಹೇಳಿದ್ದೇನೆ. ಈ ಳಿವಿ ಹುದ್ದೆಗಳು ಏನಿವೆ, ಅವುಗಳನ್ನು ಅತಿ ಶೀಘ್ರದಲ್ಲಿ ತುಂಬ ತಕ್ಕಂಥ ಒಂದು ಕೆಲಸ ಮಾಡಲಾಗುತ್ತದೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಮುಂದೆ ಭರ್ತಿ ಮಾಡುವಾಗ ಜಾಗ್ರತೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ ಹಿಂದಿನ ಸರ್ಕಾರ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಈ ಒಂದು ನೇಮಕಾತಿ ನಿಧಾನಗತಿಯಲ್ಲಿ ಸಾಗಿದ್ದರಿಂದ ತುಂಬಾ ಕಷ್ಟ ಆಯಿತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ೮ ತಿಂಗಳಾದರೂ ಸಹ ಈ ಉಪಾಧ್ಯಾಯರ ಕೊರತೆ ನಿಗದೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲೆಗಳಿಗೆ ಭಾರಿ ಕಷ್ಟದಪರಿಸ್ಥಿತಿ ಇದೆ ತಾವು ಎಷ್ಟು ಸಮಯದ ಒಳಗಡೆ ಈ ಹುದ್ದೆಗಳನ್ನು ತುಂಬುತ್ತೀರಿ ಎನ್ನುವ ಆಶ್ವಾಸನೆ ಏನ್ನು ಕೊಡುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್. —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಆಪಾದನೆಯನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದು ೬-೭ ತಿಂಗಳಲ್ಲಿ ಈ ಬಗ್ಗೆ ಸಾಕಷ್ಟು ಪ್ರಯತ್ನ ನಡೆದಿದೆ. ಎಲ್ಲಾ ಕೆಲಸಗಳೂ ಶೀಘ್ರಗತಿಯಿಂದ ನಡೆದಿದೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸಹ ಶೀಘ್ರವಾಗಿ ಮಾಡುತ್ತೇವೆ.

ರಾಜ್ಯದಲ್ಲಿ ಖುಷ್ಕಿ ಅಭಿವೃದ್ಧಿ ಯೋಜನೆ

೧೧೨೧. ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಖುಷ್ಕಿ ಅಭಿವೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಯಾವಾಗ ಪ್ರಾರಂಭಿಸಲಾಯಿತು ?

ಆ) ಇದುವರೆಗೆ ಈ ಯೋಜನೆಗೆ ವೆಚ್ಚ ಮಾಡಿರುವ ಒಟ್ಟು ಹಣವೆಷ್ಟು ? ಮತ್ತು ಯೋಜನೆಗಳ ರೂಪಗಳಾವವು ?

ಇ) 1989-90ನೇ ಸಾಲಿನಲ್ಲಿ ಈ ಯೋಜನೆಗೆ ಖರ್ಚು ಮಾಡಿರುವ ಹಣವೆಷ್ಟು ? ಮತ್ತು 1990-91ನೇ ಸಾಲಿನಲ್ಲಿ ಖರ್ಚು ಮಾಡಲು ಉದ್ದೇಶಿಸಿರುವ ಹಣವೆಷ್ಟು ?

ಈ) ವಿಭಾಗೀಯ ಮಟ್ಟದಲ್ಲಿ ಖುಷ್ಕಿ ಅಭಿವೃದ್ಧಿ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಹೆಚ್ಚಿನ ಪ್ರಮಾಣದಲ್ಲಿ ಜಲಾನಯನ ಆಧಾರದ ಮೇಲೆ ಖುಷ್ಕಿ ಭೂ ಅಭಿವೃದ್ಧಿ ಕಾರ್ಯಕ್ರಮವನ್ನು 1984-85ರಿಂದ ತೆಗೆದುಕೊಳ್ಳಲಾಗಿದೆ.

ಆ) 1984-85ರಿಂದ 1989-90ರ ವರೆಗೆ 19ಜಿಲ್ಲಾ ಜಲಾನಯನ ಕಾರ್ಯಗಳಿಗಾಗಿ ಒಟ್ಟು 53.77 ಕೋಟಿ ರೂ.ಗಳು ಖರ್ಚಾಗಿರುತ್ತದೆ. ಖುಷ್ಕಿ ಭೂ ಅಭಿವೃದ್ಧಿ ಕಾರ್ಯಕ್ರಮದ ಮುಖ್ಯ ರೂಪಗಳಾವುವೆಂದರೆ

1) ಮಳೆ ಆಧಾರಿತ ಕೃಷಿ ಸಾಗುವಳಿಯಲ್ಲಿನ ತೊಂದರೆಗಳನ್ನು ಕನಿಷ್ಟಗೊಳಿಸುವುದು.

2) ಸ್ಥಳದಲ್ಲೇ ಇಂಗುವ ತೇವಾಂಶವನ್ನು ಸಂರಕ್ಷಿಸಿ ಸುಧಾರಿತ ಬೆಳೆ ವ್ಯವಸ್ಥೆ ಮೂಲಕ ಮಳೆ ನೀರಿನ ಗರಿಷ್ಠ ಪ್ರಯೋಜನ ಪಡೆಯುವುದು.

3) ಭೂ ಸವೆತ ಮತ್ತು ಮೇಲ್ಮೈ ನೀರಿನ ನಿಯಂತ್ರಣಕ್ಕಾಗಿ ಸಾಗುವಳಿ ಭೂ ಅಭಿವೃದ್ಧಿ ಮಾಡುವುದು.

4) ಹುಲ್ಲುಗಾವಲು ಮತ್ತು ಅರಣ್ಯಗಳನ್ನು ಬೆಳೆಸಲು ಸಾಗುವಳಿಯಲ್ಲದ ಭೂಮಿಯ ನಿರ್ವಹಣೆ ಮಾಡುವುದು.

5) ಮಳೆಯ ಆಧಾರಿತ ಸಾಗುವಳಿ ಪ್ರದೇಶದಲ್ಲಿ ಬೆಳೆ ಉತ್ಪಾದನೆ ಹೆಚ್ಚಿಸುವುದು.

ಇ) 1989-90ನೇ ಸಾಲಿನಲ್ಲಿ 9.92 ಕೋಟಿ ರೂಪಾಯಿಗಳು ಖರ್ಚು ಮಾಡಲಾಗಿದೆ. 1990-91ನೇ ಸಾಲಿನಲ್ಲಿ ಒಟ್ಟು 1664.50 ಲಕ್ಷ ರೂ.ಗಳ ಕಾರ್ಯಕ್ರಮ ತೆಗೆದು ಕೊಳ್ಳುವ ಯೋಜನೆ ಇದೆ.

ಈ) ಇದೆ ಸ್ವಾಮಿ.

ಶ್ರೀ ಬಿ. ಶಿವರಾಮು.—ಮಾನ್ಯ ಅಧ್ಯಕ್ಷರೇ ನನ್ನ (ಈ)ಪ್ರಶ್ನೆಗೆ ಮಾನ್ಯ ಮಂತ್ರಿಗಳು "ಹೌದು" ಎಂದು ಉತ್ತರ ಕೊಟ್ಟಿದ್ದಾರೆ. ವಿಭಾಗೀಯ ಮಟ್ಟದಲ್ಲಿ ಖುಷ್ಕಿ ಅಭಿವೃದ್ಧಿ ಮಂಡಲಿಗಳಿಗೆ ಅಧ್ಯಕ್ಷರನ್ನು ನೇಮಿಸುವಾಗ ಆಧಿಕಾರಿಗಳನ್ನು ನೇಮಿಸುತ್ತೀರೋ ಅಥವಾ ಆಧಿಕಾರೇತರನ್ನು ನೇಮಿಸುತ್ತೀರೋ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರದಲ್ಲಿ ಹೇಳಿರುವಂತೆ ರಾಜ್ಯದಲ್ಲಿ ಖುಷ್ಕಿ ಅಭಿವೃದ್ಧಿ ಮಂಡಲಿಗಳು ನಾಲ್ಕು ಇವೆ. ಹಿಂದಿನ ಸರ್ಕಾರದವರು ಯಾವ ರೀತಿ ಮಾಡಿದ್ದರು ಎನ್ನುವುದು ತಪ್ಪಾಗೂ ನನಗೂ ಗೊತ್ತಿದೆ. ಮುಂದೆ ನಾವು ಯಾವ ರೀತಿ ಮಾಡಬೇಕು ಎನ್ನುವುದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ. ಶಿವರಾಮು.—ಹಿಂದೆ ಆಧಿಕಾರೇತರರು ಅಧ್ಯಕ್ಷರಾಗಿದ್ದರು, ಆಮೇಲೆ ರೆವಿನ್ಯೂ ಇಲಾಖೆಯ ಡಿವಿಜನಲ್ ಕಮಿಷನರ್ ಕಂಟಿನ್ಯೂ ಆಗುತ್ತಿದ್ದಾರೆ. ಆದ್ದರಿಂದ ನಾನು ಈಗ ಈ ಪ್ರಶ್ನೆ ಕೇಳಿದ್ದೇನೆ. ನಮ್ಮ ನಮ್ಮ ಕ್ಷೇತ್ರಗಳಲ್ಲಿ ಆಗಬೇಕಾದ ಕೆಲಸಗಳು ಏನು ಇರುತ್ತವೆ, ಆ ಎಲ್ಲಾ ಕೆಲಸ ಗಳನ್ನು ಮಾಡಿಕೊಳ್ಳಲು ಆಧಿಕಾರೇತರರು ಅಧ್ಯಕ್ಷರಾಗಿದ್ದರೆ ನಮ್ಮ ಕ್ಷೇತ್ರದ ಕೆಲಸಗಳನ್ನು ಮಾಡಿ ಕೊಳ್ಳಲು ಅಧ್ಯತೆ ಸಿಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ನನಗೆ ಉತ್ತರ ಹೇಳಬೇಕು,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಶಾಸಕರನ್ನು ಆ ಭಾಗದಲ್ಲಿ ಅಧ್ಯಕ್ಷರನ್ನಾಗಿ ಮಾಡ ಬೇಕೆನ್ನುವ ಅಂತಿಮ ತೀರ್ಮಾನಕ್ಕೆ ಸರ್ಕಾರ ಬರುವುದಾದರೆ ನಿಮ್ಮ ಸಂತೋಷದಲ್ಲಿ ನಾನೂ ಸಹ ಭಾಗಿ ಆಗುತ್ತೇನೆ. ಆದರೆ ಆದು ಸರ್ಕಾರದ ಪರಿಶೀಲನೆಯಲ್ಲಿದೆ. ಆ ಭಾಗದ ಶಾಸಕರಲ್ಲಿ ಯಾರನ್ನು ಅಧ್ಯಕ್ಷರನ್ನಾಗಿ ಮಾಡಿದರೂ ಸಹ ತಾವೆಲ್ಲ ಸಹಕರಿಸುತ್ತೀರಿ ಎನ್ನುವ ವಿಚಾರ ನನಗೆ ಗೊತ್ತು. ಆದರೂ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಶಿವರಾಮು.—ಯಾರನ್ನು ಮಾಡಿದರೂ ಸಹ ಉಳಿದ ಶಾಸಕರು ಸಹಕರಿಸುತ್ತೇವೆ. ಒಟ್ಟಿನಲ್ಲಿ ಶಾಸಕರನ್ನು ಮಾಡಿದರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಒಳ್ಳೆಯ ಸಲಹೆ. ಸರ್ಕಾರ ಇದನ್ನು ತೀವ್ರವಾಗಿ ಗಮನದಲ್ಲಿಟ್ಟು ಕೊಳ್ಳುತ್ತದೆ.

ಕೊಳ್ಳೇಗಾಲದಲ್ಲಿ ಕುಡಿಯಲಿನ ನೀರಿನ ಕೊರತೆ

೧೦೮೮. ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ).—ಮಾನ್ಯ ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಳ್ಳೆಗಾಲ ಪಟ್ಟಣದಲ್ಲಿ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಇರುವ ನೀರಿನ ಟ್ಯಾಂಕ್ ೨೦ ವರ್ಷಗಳ ಹಿಂದೆ ನಿರ್ಮಾಣಗೊಂಡಿದೆಯೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಇ) ಹಾಗಿದ್ದಲ್ಲಿ, ಈಗಿರುವ ಜನಸಂಖ್ಯೆಗೆ ಅನುಗುಣವಾಗಿ ನೀರನ್ನು ಒದಗಿಸಲು ೨ನೇ ಹಂತದ ನೀರು ಸರಬರಾಜು ಯೋಜನೆಯನ್ನು ಸಿದ್ಧಪಡಿಸಲಾಗುವುದೇ ?

ಈ) ಹಾಗಿದ್ದಲ್ಲಿ, ಯಾವಾಗ ಸಿದ್ಧಪಡಿಸಿ ಕಾರ್ಯಗತಗೊಳಿಸಲಾಗುವುದು ?